# ಬಹುರೂಪಿ ಗೃಹಿಣಿ!



**ಮನೆಯಲ್ಲಿ ಸಂಬಳವಿಲ್ಲದೆ, ರಜೆಯಿಲ್ಲದೆ, ಪ್ರಶಂಸೆಯಿಲ್ಲದೆ ಕೆಲಸ ಮಾಡುವ ಗೃಹಿಣಿಯರಿಗೆ ಸಿಗುವ ಪಾರಿತೋಷಕವೆಂದರೆ, ಕೆಲಸವಿಲ್ಲದವರೆಂಬ ಬಿರುದು. ಎಂತಹ ವಿಪರ್ಯಾಸವಲ್ಲವೇ? ಆದರೆ ಗೃಹಿಣಿ ಬಹುರೂಪಿ ಎಂಬುದು ನಿತ್ಯಸತ್ಯ!**

■ **ಲಾವಣ್ಯಗೌರಿ ವೆಂಕಟೇಶ**

ನೀವು ಏನು ಕೆಲಸ ಮಾಡುತ್ತಿದ್ದೀರಾ? ಎಂದು ಯಾರಾದರೂ ಕೇಳಿದ ತಕ್ಷಣ ಬಹುತೇಕ ಗೃಹಿಣಿಯರು ಸಂಕೋಚದಿಂದ ಹೇಳುವುದು, 'ಏನೂ ಇಲ್ಲ, ಮನೆಯಲ್ಲೇ, ಹೋಮ್ ಮೇಕರ್' ಎಂದು!

ಹಾಗಾದರೆ ಮನೆಯಲ್ಲಿ ಮಾಡುವುದು ಕೆಲಸವಲ್ಲವೇ? ಮನೆಯಿಂದ ಹೊರಗೆ ಹೋಗಿ ಕೆಲಸ ಮಾಡಿ ಆರ್ಥಿಕವಾಗಿ ಸಬಲರಾಗಿದ್ದರೆ ಮಾತ್ರ ಅದು ಕೆಲಸವೇ? ಸಂಬಳವಿಲ್ಲದ, ರಜೆಯಿಲ್ಲದ, ಪಿಂಚಣಿಯಿಲ್ಲದ, ಮನ್ನಣೆಯಿಲ್ಲದ, ಕೃತಜ್ಞತೆಯಿಲ್ಲದ ಗೃಹಿಣಿಯ ಕೆಲಸ ಕೆಲಸವಲ್ಲವೇ? ದಿನವಿಡೀ ಕೆಲಸ ಮಾಡಿಯೂ ಕೆಲಸವಿಲ್ಲದವರು ಎಂಬ ಹಣೆಪಟ್ಟಿ ಗೃಹಿಣಿಯರಿಗೆ ಬೇಕೇ? ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಕ್ಕಿದ್ದು ನನ್ನ ಮಗಳಿಂದ!

ನಾನೂ ಕೂಡಾ ಒಬ್ಬ ಗೃಹಿಣಿ. ನಾನು ಗೃಹಿಣಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತೆ ಮಾಡಿದ್ದು ನನ್ನ ಮಗಳು. ಒಮ್ಮೆ ಶಾಲೆಯಲ್ಲಿ ಶಿಕ್ಷಕಿಯೊಬ್ಬರು, ಎಲ್ಲಾ ಮಕ್ಕಳಿಗೂ ಅವರವರ ತಂದೆ ಹಾಗೂ ತಾಯಿಯ ಕೆಲಸದ ಬಗ್ಗೆ ವಿಚಾರಿಸುತ್ತಿದ್ದರು. ಎಲ್ಲಾ ಮಕ್ಕಳೂ ತಮ್ಮ ತಮ್ಮ ಪೋಷಕರು ಮಾಡುವ ಕೆಲಸಗಳನ್ನು ಹೇಳುತ್ತಿದ್ದರು. ಕೆಲವು ಮಕ್ಕಳು ತಮ್ಮ ತಾಯಿ ಗೃಹಿಣಿ ಎಂದು ಹೇಳದೆ, 'ಅಮ್ಮ ಕೆಲಸಕ್ಕೆ ಹೋಗುವುದಿಲ್ಲ, ಮನೆಯಲ್ಲೇ ಇರುತ್ತಾರೆ' ಎಂದು ಉತ್ತರಿಸಿದ್ದರು. ಆದರೆ ನನ್ನ ಮಗಳ ಉತ್ತರ ಮಾತ್ರ ಎಲ್ಲರಿಗಿಂತಲೂ ಭಿನ್ನವಾಗಿತ್ತು. ಆಕೆ ತನ್ನ ತಂದೆಯ ಕೆಲಸವನ್ನು ಹೇಳಿ ನಂತರ, 'ಅಪ್ಪ ಆಫೀಸ್‌ಗೆ ಹೋಗುವ ಒಂದೇ ಕೆಲಸವನ್ನು ಮಾಡುತ್ತಾರೆ. ಆದರೆ ನನ್ನಮ್ಮ, ಅಡುಗೆ ಕೆಲಸ, ಡ್ರೈವರ್ ಕೆಲಸ, ಮನೆಗೆಲಸ, ಡಾಕ್ಟರ್ ಕೆಲಸ.... ಹೀಗೆ ಎಲ್ಲವನ್ನೂ ಮಾಡುತ್ತಾರೆ' ಎಂದು ಉತ್ತರಿಸಿದ್ದಳು. ಶಿಕ್ಷಕಿ ಆಶ್ಚರ್ಯದಿಂದ ಬೆರಗಾಗಿದ್ದರು. ನನ್ನ ಮಗಳು ಮನೆಗೆ ಬಂದು ಈ ವಿಷಯ ಹೇಳಿದಾಗ, ನನಗೂ ಕೂಡಾ ಹೌದಲ್ಲಾ, ನಾನು ಗೃಹಿಣಿಯಾಗಿ ಎಷ್ಟೆಲ್ಲಾ ಕೆಲಸಗಳನ್ನು ಮಾಡುತ್ತೀನಲ್ಲಾ ಎಂದು ನನ್ನ ಬಗ್ಗೆ ನನಗೇ ಹೆಮ್ಮೆಯೆನಿಸಿತು. ಗೃಹಿಣಿಯಾದವಳು ಬಹುರೂಪಿಯಾಗಿ ಬಹಳಷ್ಟು ಕೆಲಸಗಳನ್ನು ನಿಭಾಯಿಸುತ್ತಿದ್ದರೂ ಅದು ಆಕೆಯ ಗಮನಕ್ಕೇ ಬಂದಿರುವುದಿಲ್ಲ.

ಹೌದು, ಗೃಹಿಣಿಯಾದವಳು ಮನೆ, ಗಂಡ ಮಕ್ಕಳು, ಅತ್ತೆ ಮಾವ, ಅಪ್ಪ ಅಮ್ಮ ಹೀಗೆ